**ಕರ್ನಾಟಕ ವಿಧಾನ ಪರಿಷತ್ತು**

**(147ನೇ ಅಧಿವೇಶನ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 619**

**ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸ ಬೇಕಾದ ದಿನಾಂಕ : 22.09.2022**

**ಉತ್ತರಿಸುವವರು : ಸನ್ಮಾನ್ಯ ಮುಖ್ಯ ಮಂತ್ರಿಗಳು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೀಸಲು ಅರಣ್ಯ ಪ್ರದೇಶದಿಂದ 10 ಕಿಲೋ ಮೀಟರ್ ವ್ಯಾಪ್ತಿಯ ಒಳಗೆ ಸಾಮಿಲ್ಲುಗಳು ಇರಬೇಕೆಂಬ ನಿಯಮವಿದ್ದರೂ, ಈ ನಿಯಮಗಳನ್ನು ಮೀರಿ ಹಲವಾರು ಸಾಮಿಲ್ಲುಗಳು ವಸತಿ ಪ್ರದೇಶದಲ್ಲಿದ್ದು, ಸದರಿ ಸಾಮಿಲ್ಲುಗಳನ್ನು ಸ್ಥಳಾಂತರಿಸಲು ಸಂಬಂಧಪಟ್ಟರವರಿಗೆ ನೋಟೀಸು ನೀಡಲಾಗಿದೆಯೇ; | ಕರ್ನಾಟಕ ಅರಣ್ಯ ನಿಯಮಗಳು 1969ರನ್ವಯ ಮೀಸಲು ಅರಣ್ಯ ಪ್ರದೇಶದಿಂದ 10 ಕಿಲೋ ಮೀಟರ್ ವ್ಯಾಪ್ತಿಯ ಹೊರಗೆ ಸಾಮಿಲ್ಲುಗಳು ಇರಬೇಕೆಂಬ ನಿಯಮವಿರುತ್ತದೆ (ಮುನ್ಸಿಪಲ್ ಪ್ರದೇಶ ಹಾಗೂ ಕೈಗಾರಿಕಾ ಪ್ರದೇಶಗಳನ್ನು ಹೊರತುಪಡಿಸಿ, ಮುನ್ಸಿಪಲ್ ವತಿಯಿಂದ ನಿರಾಕ್ಷೇಪಣಾ ಪತ್ರದ ಆಧಾರದ ಮೇಲೆ) ಅಲ್ಲದೇ ನಿಯಮ 163 (2) ರನ್ವಯ ವಸತಿ ಪ್ರದೇಶದಲ್ಲಿರುವ ಸಾಮಿಲ್ಲುಗಳ ಪರವಾನಿಗೆಯನ್ನು ನವೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ, ಸದರಿ ಸಾಮಿಲ್ಲುಗಳನ್ನು ಸ್ಥಳಾಂತರಿಸಲು ನೋಟೀಸ್ ನೀಡುವ ಪ್ರಮೇಯ ಉದ್ಭವಿಸುವುದಿಲ್ಲ.<br><br>ಮುನ್ಸಿಪಲ್ ಪ್ರದೇಶ ವ್ಯಾಪ್ತಿಯಲ್ಲಿರುವ ಸಾಮಿಲ್‌ನ ಮಾಲೀಕರು ಸಾಮಿಲ್ ಸ್ಥಳಾಂತರಿಸಲು ಕೋರಿಕೆ ಸಲ್ಲಿಸಿದಲ್ಲಿ, ನಿಯಮಾನುಸಾರ ಪರಿಶೀಲಿಸಿ, ಕರ್ನಾಟಕ ಅರಣ್ಯ ನಿಯಮಗಳು 1969ರ ನಿಯಮ 163(2ಎ)ರನ್ವಯ ಸ್ಥಳಾಂತರಿಸಲು ಕ್ರಮ ಕೈ ಗೊಳ್ಳಲಾಗುತ್ತದೆ. |
| ಆ) | ಕಳೆದ 3 ವರ್ಷಗಳಲ್ಲಿ ರಾಜ್ಯದ ಎಷ್ಟು ಸಾಮಿಲ್ಲುಗಳನ್ನು ಸ್ಥಳಾಂತರಿಸಲು ನೋಟೀಸ್ ನೀಡಲಾಗಿದೆಯೇ; (ಜಿಲ್ಲಾವಾರು ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ಮೀಸಲು ಅರಣ್ಯ ಪ್ರದೇಶದಿಂದ 10 ಕಿ.ಲೋ ಮೀಟರ್‌ವ್ಯಾಪ್ತಿಯ ಒಳಗೆ ಸಾಮಿಲ್ಲುಗಳು ಇರಬೇಕೆಂಬ ನಿಯಮವನ್ನು ಸ್ಪಷ್ಟವಾಗಿ ಉಲ್ಲಂಘಿಸಿದ ಕುರಿತು ಇಲಾಖೆಯು ಸದನದಲ್ಲಿ ಲಿಖಿತವಾಗಿ ಉತ್ತರಿಸಿದ ಬಳಿಕವೂ ಮೀಸಲು ಅರಣ್ಯ ಪ್ರದೇಶದಿಂದ 13 ಕಿಲೋ ಮೀಟರ್ ವ್ಯಾಪ್ತಿಯಷ್ಟು ದೂರದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಜನವಸತಿ ಪ್ರದೇಶವಾದ ಕೃಷ್ಣಾಪುರ, ಕಾಟಿಪಳ್ಳ ಗ್ರಾಮದಲ್ಲಿ ಸಾಮಿಲ್ಲುಗಳ ಸ್ಥಳಾಂತರ ಮಾಡಲು ನೋಟೀಸ್ ನೀಡಲಾಗಿದೆಯೇ: ಇಲ್ಲವಾದಲ್ಲಿ ನೋಟೀಸ್ ನೀಡದಿರಲು ಕಾರಣಗಳೇನು: ಯಾವಾಗ ನೋಟೀಸ್ ನೀಡಲಾಗುವುದು? | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪಿಯಲ್ಲಿರುವ ಜನವಸತಿ ಪ್ರದೇಶವಾದ ಕೃಷ್ಣಾಪುರ, ಕಾಟಿಪಳ್ಳ ಗ್ರಾಮದಲ್ಲಿ ಸಾಮಿಲ್ಲುಗಳು ಬಹಳ ವರ್ಷಗಳ ಹಿಂದೆಯೇ ಕರ್ನಾಟಕ ಅರಣ್ಯ ನಿಯಮಗಳು 1969ರ ನಿಯಮ 163 ರನ್ವಯ ಸ್ಥಾಪನೆಯಾಗಿರುವುದರಿಂದ ಪ್ರಸ್ತುತ ಮಂಗಳೂರು ಮಹಾನಗರ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರದ ಆಧಾರದ ಮೇಲೆ ನವೀಕರಿಸಲಾಗುತ್ತಿರುವುದರಿಂದ, ಸಾಮಿಲ್ ಮಾಲೀಕರಿಗೆ ಸಾಮಿಲ್ ಸ್ಥಳಾಂತರ ಮಾಡಲು ನೋಟೀಸ್ ನೀಡಿರುವುದಿಲ್ಲ. |

**ಸಂಖ್ಯೆ: ಅಪಜೀ 47 ಎಫ್‌ಡಿಪಿ 2022**

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ